ಕಾಮ್ ನ್ಯೂಸ್

CAM NEWS

37 ● ಅಕ್ಟೋಬರ್ 2012

CENTRE FOR AGRICULTURAL MEDIA
ಕೃಷಿ ಮಾಧ್ಯಮ ಕೇಂದ್ರ

# ಉತ್ತಮ ಫಲಿತಾಂಶ

ಈ ಬಾರಿ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿಗೆ ನೋಂದಾಯಿಸಿದ್ದ 22 ಅಭ್ಯರ್ಥಿಗಳ ಪೈಕಿ 16 ಮಂದಿ ಯಶಸ್ವಿಯಾಗಿ ತರಬೇತಿಯನ್ನು ಪೂರೈಸಿದ್ದಾರೆ. ಶೇಕಡಾವಾರು ಹೋಲಿಸಿದರೆ ಬಹುಶಃ ಕಳೆದ ಒಂಭತ್ತು ವರ್ಷಗಳಲ್ಲಿ ದೊರೆತ ಅತ್ಯುತ್ತಮ ಫಲಿತಾಂಶ ಇದಾಗಿದೆ. ತರಬೇತಿಯಲ್ಲಿ ಉತ್ತೀರ್ಣರಾದ ಅಷ್ಟೂ ಮಂದಿ ಕಳೆದ ಒಂದು ವರ್ಷ ಪೂರ್ಣಮನಸ್ಸಿನಿಂದ ತರಬೇತಿಯಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ವರ್ಷದ 'ಅತ್ಯುತ್ತಮ ಅಭ್ಯರ್ಥಿ' ಹಿರಿಮೆಗೆ ಡಾ. ಗಣೇಶ ಹೆಗಡೆ ಪಾತ್ರರಾಗಿದ್ದಾರೆ. ಅವರು ಕಳೆದ ಒಂದು ವರ್ಷದಲ್ಲಿ ಬರೆದ 23 ಲೇಖನಗಳು ಹಾಗೂ ಹತ್ತಾರು ಸಂಪಾದಕರಿಗೆ ಪತ್ರಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಲೇಖನ, ನುಡಿಚಿತ್ರ, ಸಂದರ್ಶನ, ವಿಶ್ಲೇಷಣಾತ್ಮಕ ಬರಹ ಹೀಗೆ ಬರವಣಿಗೆಯ ವಿವಿಧ ಪ್ರಕಾರಗಳಲ್ಲಿ ಅವರು ಪರಿಶ್ರಮಪಟ್ಟಿದ್ದಾರೆ. ಇವೆಲ್ಲದರ ಜೊತೆಗೆ ಅವರು ಕೃಷಿ–ಹೈನುಗಾರಿಕೆ–ಗ್ರಾಮೀಣಾಭಿವೃದ್ಧಿ ಸಂಬಂಧಿ ಲೇಖನಗಳ ಸಕ್ರಿಯ ಓದುಗರೂ ಹೌದು. ಈ ಮಧ್ಯೆ ಸಾವಯವ–ಸ್ವಾವಲಂಬನೆ–ಮೌಲ್ಯವರ್ಧನೆ–ನೇರ ಮಾರುಕಟ್ಟೆ ಸಾಧಕ ಬೆಂಗಳಿ ವೆಂಕಟೇಶ ಅವರ ಅನುಭವ ಕಥನವನ್ನು ಡಾ. ಹೆಗಡೆ ದಾಖಲಿಸಿದ್ದು ಅದು ಶೀಘ್ರ ಪುಸ್ತಕರೂಪದಲ್ಲಿ ಪ್ರಕಟವಾಗಲಿದೆ. ಇನ್ನೂ ಕೆಲ ಅಭ್ಯರ್ಥಿಗಳ ಲೇಖನಗಳಿಗೆ ಉತ್ತಮ ಪ್ರತಿಕ್ರಿಯೆ ಲಭ್ಯವಾಗಿದೆ. ಅಭ್ಯರ್ಥಿಗಳ ಲೇಖನವನ್ನಾಧರಿಸಿ ವಿವಿಧ ಮಾಧ್ಯಮಗಳು ಕಾರ್ಯಕ್ರಮವನ್ನೂ ರೂಪಿಸಿವೆ. ತಮ್ಮ ಲೇಖನಕ್ಕೆ ಬಂದ ಪ್ರತಿಕ್ರಿಯೆಗಳನ್ನು ಡಾ. ನಾಗರಾಜ್ ಒಳಪುಟದಲ್ಲಿ ದಾಖಲಿಸಿದ್ದಾರೆ. ನೂತನ ಕಾಮ್ ಫೆಲೋಗಳಿಗೆ ಅಭಿನಂದನೆಗಳು. ಇದರೊಂದಿಗೆ ಇದುವರೆಗಿನ ಒಟ್ಟು ಫೆಲೋಗಳ ಸಂಖ್ಯೆ 105 ತಲುಪಿದೆ.

ಕಳೆದ ಸಂಚಿಕೆಯಲ್ಲಿ ತಿಳಿಸಿರುವಂತೆ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿಯನ್ನು ಒಂದೆರಡು ವರ್ಷಗಳ ಕಾಲ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಚುರುಕಾಗಿರುವ ಕಾಮ್ ಫೆಲೋಗಳ ಬರವಣಿಗೆಯ ಸುಧಾರಣೆಗೆ ಪ್ರಯತ್ನಿಸುವುದರ ಜೊತೆಗೆ ಬರವಣಿಗೆಯಿಂದ ವಿಮುಖರಾಗಿರುವ ಕೆಲವರನ್ನು ಮತ್ತೆ ಪತ್ರಿಕೋದ್ಯಮದತ್ತ ಪ್ರೇರೇಪಿಸಲು ನಿರ್ಧರಿಸಿದ್ದೇವೆ. ಈ ನಿಟ್ಟಿನಲ್ಲಿ ಅಗತ್ಯವೆನಿಸಿದರೆ ಹಾಗೂ ಕಾಮ್ ಫೆಲೋಗಳು ಜವಾಬ್ದಾರಿ ವಹಿಸಿಕೊಳ್ಳಲು ಸಿದ್ಧವಿದ್ದರೆ ಗಾಜನೂರು ಕಾರ್ಯಕ್ರಮದ ಮಾದರಿಯಲ್ಲಿ ಕೆಲವೆಡೆ ಪುನರ್ಮನನ ಶಿಬಿರ ಹಮ್ಮಿಕೊಳ್ಳಬಹುದು. ಅಂಥದ್ದೊಂದು ಶಿಬಿರವನ್ನು ರಾಮನಗರ–ಕನಕಪುರ ಪ್ರದೇಶದಲ್ಲಿ ಆಯೋಜಿಸಲು ಕಾಮ್ ಫೆಲೋಗಳಾದ ಗಣಪತಿ ಭಟ್ ಹಾರೋಹಳ್ಳಿ ಹಾಗೂ ಜಿ. ಶಿವಣ್ಣ ಮುಂದೆಬಂದಿದ್ದಾರೆ.

ಈ ಬಾರಿ ಕೃಷಿ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಸಿರಿಧಾನ್ಯ ಲೇಖನ ಪ್ರಶಸ್ತಿಗೆ ಸೂಕ್ತ ಪ್ರವೇಶಗಳು ಬಂದಿಲ್ಲವಾದ್ದರಿಂದ ಈ ಎರಡೂ ಪ್ರಶಸ್ತಿಗಳನ್ನು ನೀಡುತ್ತಿಲ್ಲ.

ಕಾಮ್ ಪುಸ್ತಕಗಳನ್ನು ಖರೀದಿಸುವಂತೆ ನಾವು ಮಾಡಿದ್ದ ವಿನಂತಿಗೆ ಕಾಮ್ ಫೆಲೋ ಪ್ರಕಾಶ್ ಭಟ್ ಕರ್ಕಿ ತಕ್ಷಣವೆ ಸ್ಪಂದಿಸಿದ್ದಾರೆ. ಕೇಂದ್ರ ಪ್ರಕಟಿಸಿರುವ ಪುಸ್ತಕಗಳ ಪ್ರತಿಗಳನ್ನು ಉಡುಗೊರೆ–ಬಹುಮಾನ ನೀಡುವ ಸಲುವಾಗಿ ಕೊಂಡಿಕೊಂಡಿದ್ದಾರೆ. ಅವರಿಗೆ ಧನ್ಯವಾದಗಳು. ಇತರ ಕಾಮ್ ಫೆಲೋಗಳು ಹಾಗೂ ಹಿತೈಷಿಗಳು ಈ ನಿಟ್ಟಿನಲ್ಲಿ ಆಸಕ್ತಿ ತೋರಬೇಕಾಗಿ ಮತ್ತೊಮ್ಮೆ ಕೋರಿಕೆ.

**ಕೇಂದ್ರದ 12ನೇ ವಾರ್ಷಿಕೋತ್ಸವ ಕಳೆದ ವರ್ಷದ ವೇದಿಕೆಯಲ್ಲೇ ಸರಳವಾಗಿ ನಡೆಯಲಿದೆ. ಧಾರವಾಡ ಸಮೀಪದ 'ಸುಮನ ಸಂಗಮ' ಕಾಡುತೋಟದಲ್ಲಿ ಆತ್ಮದೀಪ – ಆರೋಗ್ಯ ಮತ್ತು ಪರಿಸರ ಸಂಘಟನೆ ಹಾಗೂ ಕರ್ನಾಟಕ ಶಿಕ್ಷಣ ಜಾಲದ ಸಹಯೋಗದಲ್ಲಿ ಅಕ್ಟೋಬರ್ 28ರಂದು ಮಧ್ಯಾಹ್ನ 3.30ಕ್ಕೆ ಕಾರ್ಯಕ್ರಮ.** ಆ ಸಂದರ್ಭದಲ್ಲಿ ಕಾಮ್ ಫೆಲೋ ಪ್ರಮಾಣ ಪತ್ರ ವಿತರಣೆ ಹಾಗೂ ಅಡಿಕೆ ಪತ್ರಿಕೆಯಲ್ಲಿ ಪ್ರಕಟವಾದ ಕಾಮ್ ಅಭ್ಯರ್ಥಿಗಳು ಹಾಗೂ ಫೆಲೋಗಳ ಉತ್ತಮ ಲೇಖನಗಳಿಗೆ ಬಹುಮಾನ ನೀಡಲಾಗುತ್ತದೆ. ಕಾರ್ಯಕ್ರಮಕ್ಕೆ ನಿಮಗೆಲ್ಲರಿಗೂ ಆದರದ ಸ್ವಾಗತ.

**– ಅನಿತಾ ಪೈಲೂರು**

## ಕಾಮ್ ಫೆಲೋಗಳಲ್ಲಿ ವಿನಂತಿ

- ಕನಿಷ್ಠ ತಿಂಗಳಿಗೆ ಒಂದಾದರೂ ಲೇಖನ ಬರೆಯಿರಿ.
- ನಿಮ್ಮ ಪ್ರಕಟಿತ ಲೇಖನಗಳ ವಿವರಗಳನ್ನು (ಶೀರ್ಷಿಕೆ, ಪ್ರಕಟಗೊಂಡ ಪತ್ರಿಕೆ, ದಿನಾಂಕ) ತಿಂಗಳಿಗೊಮ್ಮೆ ನಮಗೆ ಈಮೇಲ್ ಅಥವಾ ಪತ್ರಮುಖೇನ ಕಳುಹಿಸಿಕೊಡಿ.
- ನಿಮಗೆ ಸಮೀಪವಿರುವ ಈ ವರ್ಷದ ಕಾಮ್ ಫೆಲೋಗಳೊಂದಿಗೆ ಸಂಪರ್ಕವಿಟ್ಟುಕೊಂಡು ವಿಚಾರ ವಿನಿಮಯ ಮಾಡಿಕೊಳ್ಳಿ.
- ಕೇಂದ್ರದ ಪ್ರಕಟಣೆಗಳ ಮಾರಾಟದಲ್ಲಿ ಕೈಜೋಡಿಸಿ. ಉಡುಗೊರೆ ನೀಡುವ ಸಂದರ್ಭದಲ್ಲಿ ಕಾಮ್ ಪುಸ್ತಕಗಳನ್ನೇ ಬಳಸಿ.
- ಉದ್ಯೋಗ, ವಿಳಾಸದಲ್ಲಿ ಬದಲಾವಣೆಯಾದಾಗ ತಿಳಿಸಿ.

## ಪ್ರತಿಕ್ರಿಯೆ:

ಹತ್ತು ವರ್ಷಗಳಿಂದ ಸತತವಾಗಿ ನಡೆಯುತ್ತಿದ್ದ ಪತ್ರಿಕೋದ್ಯಮ ತರಬೇತಿ ತಾತ್ಕಾಲಿಕವಾಗಿ ನಿಲ್ಲಿಸಲಾಗುತ್ತದೆ ಎಂದು ತಿಳಿದಾಗ ನನ್ನಂತಹ ಹಲವರಿಗೆ ನಿರಾಶೆಯಾಗಬಹುದು. ಆದರೆ ನಿಧಾನವಾಗಿ ಯೋಚಿಸಿದಾಗ ನೂರು ಮಂದಿ ತರಬೇತಿ ಮುಗಿಸಿದರೂ ಬರೆಯುತ್ತಿರುವವರು ಅದರರ್ಧವೂ ಇಲ್ಲ ಎಂದಾಗ ಬೇಸರವೆನಿಸುತ್ತದೆ. ಲೇಖನಿ ಬದಿಗಿಟ್ಟವರನ್ನು ಎಚ್ಚರಿಸುವ ಮಾರ್ಗೋಪಾಯಗಳ ಕುರಿತೂ ಯೋಚಿಸಬೇಕಾಗಿದೆ.

ಕಾಮ್ ಫೆಲೋಗಳಿಗೆ ಇದು ಸಂತಸದ ಸುದ್ದಿಯೇ. ಕೆಲಸದ ಒತ್ತಡದಲ್ಲಿ, ತರಬೇತಿಯಲ್ಲಿ ತೊಡಗಿಸಿಕೊಂಡಿರುವವರತ್ತ ಹೆಚ್ಚಿನ ಗಮನಹರಿಸಬೇಕಾದ ಅನಿವಾರ್ಯತೆಯಲ್ಲಿರುವ ಅನಿತಾ ಅವರನ್ನು ಸಂಪರ್ಕಿಸಲು ಸಂಕೋಚವೆನಿಸಿ ನಮ್ಮ ಅನೇಕ ಸಂದೇಹಗಳು ಹಾಗೆಯೇ ಉಳಿದುಬಿಡುತ್ತಿದ್ದವು. ಎಷ್ಟೋ ಬಾರಿ ಚರ್ಚಿಸಬೇಕೆಂದಿದ್ದ ಲೇಖನಗಳು ಅರ್ಧಕ್ಕೇ ನಿಂತಾಗ ಬೇಸರವಾಗುತ್ತಿದ್ದುದು ನಿಜ. ಇನ್ನು ಮುಂದೆ ನಮ್ಮೆಲ್ಲರ ಸಮಸ್ಯೆಗಳಿಗೂ ಪರಿಹಾರ ದೊರೆಯಬಹುದೆಂಬ ಆಸೆ.

ಪುನರ್ಮನನ ಶಿಬಿರಗಳ ಅವಶ್ಯಕತೆ ಖಂಡಿತ ಇದೆ. ಪರಸ್ಪರ ಭೇಟಿ, ಸಂವಾದ, ಸಂವಹನ ಲೇಖನಗಳ ಗುಣಮಟ್ಟ ಹೆಚ್ಚಿಸುವುದೆಂಬುದು ನನ್ನ ನಂಬಿಕೆ. ಕಾಮ್ ಬಳಗದ ಸಂಪರ್ಕ ಕೊಂಡಿಯಾಗಿ 'ಕಾಮ್ ನ್ಯೂಸ್' ಇರುವುದರಿಂದ ಎಲ್ಲರೂ ಹತ್ತಿರವೇ ಇದ್ದಂತೆ ಭಾಸವಾಗುತ್ತದೆ.

**– ಅನುಸೂಯ ಶರ್ಮ**
49, 2ನೇ ಹಂತ, 5ನೇ ಮೇನ್
ಪೋಸ್ಟಲ್ ಕಾಲನಿ, ಸಂಜಯ ನಗರ, ಬೆಂಗಳೂರು 560 094

# ಬರವಣಿಗೆಯ ಹೊಸ ಹಾದಿ

**– ಗಣೇಶ ಎಂ. ಹೆಗಡೆ**

ಓದುವುದು ಚಿಕ್ಕಂದಿನಿಂದಲೂ ನನ್ನ ಅತ್ಯಂತ ಪ್ರಿಯ ಹವ್ಯಾಸ. ಮೊದಲೆಲ್ಲ ಆಗೊಮ್ಮೆ ಈಗೊಮ್ಮೆ ಎಂಬಂತೆ ತೀರ ವಿರಳವಾಗಿ ಲೇಖನಗಳನ್ನು ಬರೆಯುತ್ತಿದ್ದೆ. ಕಾಮ್ ತರಬೇತಿಯ ಈ ಅವಧಿಯಲ್ಲಿ ತಿಂಗಳಿಗೊಮ್ಮೆ ಅಸೈನ್‌ಮೆಂಟ್ ಕಳಿಸಬೇಕಾದ ಅನಿವಾರ್ಯತೆ. ಹೀಗಾಗಿ ಬರವಣಿಗೆಯನ್ನು ಹೆಚ್ಚು ಸೀರಿಯಸ್ ಆಗಿ ತೆಗೆದುಕೊಳ್ಳಲು ಸಾಧ್ಯವಾಯಿತು.

ಪ್ರಾಥಮಿಕ ಶಿಬಿರದಲ್ಲಿ ಭಾಗವಹಿಸಿ ಮಾರ್ಗದರ್ಶನ ಪಡೆದ ನಂತರ ಮುಂದಿದ್ದ ಪ್ರಶ್ನೆ 'ವಿಷಯದ ಆಯ್ಕೆ ಹೇಗೆ' ಎಂಬುದು. ಆದರೆ ನನಗೆ ಇದು ದೊಡ್ಡ ಸಮಸ್ಯೆಯಾಗಿ ಕಾಡಲಿಲ್ಲ. ಒಬ್ಬ ವೃತ್ತಿಪರ ಪಶುವೈದ್ಯನಾಗಿ ಸುಮಾರು ಹತ್ತು ಗಂಟೆಗಳಷ್ಟು ಕಾಲ ಗ್ರಾಮೀಣ ಪ್ರದೇಶದಲ್ಲಿ ಜನರು ಮತ್ತು ಜಾನುವಾರುಗಳ ಒಡನಾಟದಲ್ಲಿರುವುದು ದೈನಂದಿನ ವಿದ್ಯಮಾನ. ಇದರಿಂದ ನನ್ನ ವೃತ್ತಿಯ ಕುರಿತಾಗಿಯೇ ಅನೇಕಾನೇಕ ವಿಷಯಗಳು ಬರವಣಿಗೆಗೆ ಸಿಗುತ್ತಿರುತ್ತವೆ.

ಇಂತಹ ವಿಷಯಗಳಲ್ಲಿ ಎರಡು ಪ್ರಕಾರಗಳನ್ನು ನಾನು ಗುರುತಿಸಿಕೊಂಡಿದ್ದೇನೆ. ಮೊದಲನೆಯದು ರೈತರಿಗೆ ತಿಳಿವಳಿಕೆ ನೀಡುವಂತಹ ವಿಷಯಗಳು. ಉದಾಹರಣೆಗೆ 'ಹಸಿರು ಮೇವು, ಕೆಚ್ಚಲು ಬಾವಿನಂತಹ ರೋಗ ಬಾಧೆಗಳು, ಬೇಸಿಗೆಯಲ್ಲಿ ಜಾನುವಾರುಗಳ ನಿರ್ವಹಣೆ'–ಈ ಥರದವು. ಎರಡನೆಯದೆಂದರೆ ಒಂದು ವಿಷಯದ ಬಗ್ಗೆ ಏನಾದರೂ ಹೊಸತನ್ನು ಕಂಡುಕೊಂಡು ಯಶಸ್ವಿಯಾದ ಅಥವಾ ವಿಫಲವಾದ ಕುರಿತು ಬರೆಯುವುದು. 'ಹಸಿರು ಮೇವು ಇದೆಯೇ ಎಂದು ಖಾತರಿಪಡಿಸಿಕೊಂಡೇ ಹಸು ಖರೀದಿಸಲು ಸಾಲ ನೀಡಿ' – ಎಂಬಂತಹ ವಿಷಯಗಳು.

ಬರವಣಿಗೆಯ ಹಾದಿಯಲ್ಲಿ ಮುಕ್ತ ಮನಸ್ಸಿನಿಂದ ಸಲಹೆ ನೀಡುತ್ತಿರುವ ಸಂಪನ್ಮೂಲ ವ್ಯಕ್ತಿಗಳ ಒತ್ತಾಸೆಯಿಂದ ನನ್ನ ವೃತ್ತಿ ಸಂಬಂಧಿ ವಿಷಯದಿಂದ ಹೊರಬಂದು ಕೂಡ ಬರೆಯಲು ಸಾಧ್ಯವಾಯಿತು. ಹೈನುಗಾರಿಕೆಗೆ ಸಂಬಂಧಿಸಿದ ಲೇಖನಕ್ಕಾದರೆ ಹುಡುಕಿಕೊಂಡು ಹೊರಹೋಗಬೇಕಾದ ಅವಶ್ಯಕತೆ ಬಹುತೇಕ ಇಲ್ಲ. ಪ್ರತಿನಿತ್ಯ ಚಿಕಿತ್ಸೆಗಾಗಿ ಹಳ್ಳಿಗಳನ್ನು ಸುತ್ತುವುದರಲ್ಲೇ ಲೇಖನಕ್ಕೆ ವಿಷಯ ಸಿಕ್ಕಿಬಿಡುತ್ತದೆ. ಆದರೆ ಇದರ ಹೊರತಾಗಿ ಬರೆಯುವಾಗ ಮಾತ್ರ ಪ್ರತ್ಯೇಕ ಕ್ಷೇತ್ರಭೇಟಿಯ ಮೂಲಕ ಪ್ರತ್ಯಕ್ಷ ಅನುಭವ ಪಡೆಯುವ ಅಗತ್ಯ ಬಂತು. 'ತರಕಾರಿಯಿಂದಲೇ ಬದುಕು', 'ಫಲಗಳ ಮೌಲ್ಯವರ್ಧನೆ ಇಂದಿನ ಅವಶ್ಯಕತೆ' – ಇವು ಹೀಗೆ ಬರೆದ ಲೇಖನಗಳು.

ಬರವಣಿಗೆಯಲ್ಲಿ ನಾನು ಅನುಸರಿಸುತ್ತಿರುವ ವಿಧಾನವೆಂದರೆ ವಿಷಯವನ್ನು ಮನದಲ್ಲೇ ನಿರ್ಧರಿಸಿಕೊಂಡು ಅದರ ಕುರಿತು ನಾಲ್ಕಾರು ದಿನ ಯೋಚಿಸುವುದು. ಪೂರಕ ಮಾಹಿತಿಗಳನ್ನೆಲ್ಲ ಸಂಗ್ರಹಿಸಿಕೊಳ್ಳುವುದು. ನಂತರ ಅವುಗಳನ್ನು ಎದುರಿಗಿಟ್ಟುಕೊಂಡು ಒಂದೇ ಟೇಕ್‌ನಲ್ಲಿ ಬರೆದು ಮುಗಿಸುವುದು. ಕಾಗುಣಿತ ದೋಷಗಳು ಇರದಂತೆ ನೋಡಿಕೊಳ್ಳುವುದು ಪರಿಷ್ಕರಣೆ ಮಾಡುವಾಗಿನ ಮುಖ್ಯ ಆದ್ಯತೆಗಳಲ್ಲೊಂದು. ನಂತರ ಎರಡು ಮೂರು ದಿನಗಳ ಕಾಲ ಹಾಗೇ ಬಿಡುತ್ತೇನೆ. ಕೊನೆಗೊಂದು ದಿನ ಕುಳಿತು ಲೇಖನಕ್ಕೆ ಫೈನಲ್ ಟಚ್ ನೀಡಿ ಮೊದಲೇ ಸಂಗ್ರಹಿಸಿಕೊಂಡ ಫೋಟೊಗಳನ್ನು ಅಟ್ಯಾಚ್ ಮಾಡಿ ಅಸೈನ್‌ಮೆಂಟ್ ಪೋಸ್ಟ್ ಮಾಡುವುದು ನಾನು ಅನುಸರಿಸುತ್ತಿರುವ ಪದ್ಧತಿ. ತಿಂಗಳ ಅಸೈನ್‌ಮೆಂಟ್ ಸರಿಯಾದ ಸಮಯಕ್ಕೆ ತಲುಪಬೇಕೆಂಬ ಉದ್ದೇಶದಿಂದ ಮುಂದಿನ ಲೇಖನದ ಸಿದ್ಧತೆಯನ್ನು ತಿಂಗಳ ಮೊದಲ ವಾರದಲ್ಲೇ ಪ್ರಾರಂಭಿಸುತ್ತಿದ್ದೆ.

ಕಾಮ್ ಮಾರ್ಗದರ್ಶನವು ಕಡಿಮೆ ಶಬ್ದಗಳಲ್ಲಿ ಹೆಚ್ಚು ವಿಷಯಗಳ ಸಂವಹನ, ವಿಷಯ ಸಂಗ್ರಹಣೆಯ ಪರಿ, ಸಮಚಿತ್ತದ ಬರವಣಿಗೆ, ಒಂದೇ ವಿಷಯದ ವಿವಿಧ ಮಗ್ಗುಲುಗಳನ್ನು ವಿಶ್ಲೇಷಿಸುವುದು ಹಾಗೂ ಲೇಖನವಾಗಬಲ್ಲ ವಿಷಯಗಳ ಸುಳಿವುಗಳನ್ನು ಕಂಡುಕೊಳ್ಳುವ ಕುರಿತಾಗಿ ಅರಿಯಲು ಸಹಾಯಕವಾಯಿತು. ಒಟ್ಟಾರೆಯಾಗಿ ತರಬೇತಿಗೂ ಮುನ್ನ 'ಕಾಮ್'ದಿಂದ ನಾನು ಏನೆಲ್ಲ ನಿರೀಕ್ಷಿಸಿದ್ದೆನೋ ಅದಕ್ಕಿಂತ ಹೆಚ್ಚು ವಿಷಯಗಳನ್ನು ತಿಳಿದುಕೊಂಡೆ ಎಂದು ನಿಶ್ಚಿತವಾಗಿ ಹೇಳಬಲ್ಲೆ.

ಅಂಚೆ: ಸಾಲ್ಕಣಿ, ಶಿರಸಿ
ಉತ್ತರ ಕನ್ನಡ – 581 402
9448995595 ~ g.hegdevet@gmail.com

---

# ಕಾಮ್ ಜತೆಗಿನ ಪಯಣ

**– ಡಾ. ನಾಗರಾಜ ಕೆ.ಎಂ.**

ಮಲೆನಾಡಿನ ಪರಿಸರಕ್ಕೆ ಸೂಕ್ತವಾದ ಗುಣಗಳುಳ್ಳ ವಿಶಿಷ್ಟ ಹಸುವಿನ ತಳಿ 'ಮಲ್ನಾಡಗಿಡ್ಡ'ಕ್ಕೆ ಕೇಂದ್ರ ಸರಕಾರ 'ನಿರ್ದಿಷ್ಟ ತಳಿ' ಮಾನ್ಯತೆ ನೀಡಿದ್ದನ್ನು ಆಧರಿಸಿ ಬರೆದ ಲೇಖನ ಪ್ರಜಾವಾಣಿಯಲ್ಲಿ ಪ್ರಕಟವಾಗಿತ್ತು. ಬಂದ ಹತ್ತಾರು ಕರೆಗಳಲ್ಲಿ ಒಂದು ಕರೆ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಕಪ್ಪತಗುಡ್ಡದಲ್ಲಿರುವ ನಂದಿವೇರಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳದಾಗಿತ್ತು. ಕಳೆದೊಂದು ದಶಕದಿಂದ ಕಪ್ಪತಗುಡ್ಡಕ್ಕೆ ಮರುಜೀವ ನೀಡುವ ಕಾಯಕದಲ್ಲಿ ತೊಡಗಿಸಿಕೊಂಡಿರುವ ಸ್ವಾಮೀಜಿ, ನಾಲ್ಕೈದು ವರ್ಷಗಳ ಹಿಂದೆ ಅಲ್ಲಿ ನಡೆಯುತ್ತಿದ್ದ ಗಣಿಗಾರಿಕೆಯನ್ನೂ ತಡೆಯಲು ಪ್ರಯತ್ನಿಸಿ ಸಫಲರಾಗಿದ್ದರು. 'ಪ್ರಜಾವಾಣ್ಯಾಗ ನಿಮ್ಮ ಮಲ್ನಾಡಗಿಡ್ಡ ಓದಿದ್ವಿ; ಭೇಷ್ ಬರ್‌ದೀರಿ. ನಮಗೆ ನಾಲ್ಕು ಮಲ್ನಾಡಗಿಡ್ಡ ಬೇಕು, ಕಳ್ಸೋ ವ್ಯವಸ್ಥೆ ಮಾಡಿದ್ರ ಉಪಕಾರ ಆಗತೈತಿ ನೋಡ್ರಪಾ' ಎಂದು ಸ್ವಾಮೀಜಿ ಹೇಳಿದಾಗ ಇಲ್ಲವೆನ್ನಲಾಗಲಿಲ್ಲ. ರಾಮಚಂದ್ರಾಪುರ ಮಠದ ಪಶುವೈದ್ಯ ಡಾ. ಕೃಷ್ಣಮೂರ್ತಿಯವರ ಪರಿಚಯವಿದ್ದುದರಿಂದ ಸಂಪರ್ಕ ಸುಲಭವಾಯಿತು. ಮಠಕ್ಕೆ ಹಸುಗಳನ್ನು ಕಳಿಸಲು ಅವರು ಒಪ್ಪಿದರು. ಮಲ್ನಾಡಗಿಡ್ಡ ಕಪ್ಪತಗುಡ್ಡ ಸೇರಿದ್ದು ಕೇಳಿ ಖುಷಿ ಆಯಿತು. ಹಾಗೆಯೇ ಬರಹಗಾರನ ಹೆಗಲೇರುವ ಇಂತಹ ಜವಾಬ್ದಾರಿಗಳ ಅರಿವೂ ಆಯಿತು.

ಪ್ರತಿಯೊಂದು ಲೇಖನ ಪ್ರಕಟವಾದ ನಂತರವೂ ನೂರಾರು ಕರೆಗಳು ಬರುತ್ತವೆ. ಪ್ರತಿಯೊಂದು ಕರೆಯ ಆಶಯವೂ ಭಿನ್ನ. ಪಶುವೈದ್ಯನೂ ಆಗಿರುವ ನನಗೆ ಬರಹಗಾರ ಹಾಗೂ ಪಶುವೈದ್ಯ ಈ ಎರಡೂ ಹಿನ್ನೆಲೆಯಲ್ಲಿ ಪರಿಸ್ಥಿತಿ ನಿಭಾಯಿಸಬೇಕಾದ, ಇನ್ನೊಬ್ಬರಿಗೆ ಅನುಕೂಲವಾಗಲು ಸಾಧ್ಯವಾಗುವಂತಹ ಅನೇಕ ಸನ್ನಿವೇಶಗಳು ಎದುರಾಗಿವೆ. ಇನ್ನು ಮಲ್ನಾಡಗಿಡ್ಡ ಲೇಖನದ ವಿಷಯಕ್ಕೆ ಬಂದರೆ, ಲೇಖನದಲ್ಲಿ ಪ್ರಕಟವಾದ ಕಪಿಲೆಯಂತಹ (ಕೌಲು ಬಣ್ಣದ ಮಲ್ನಾಡಗಿಡ್ಡ ದನ) ಹಸುವೇ ಬೇಕೆಂದು ಪಟ್ಟುಹಿಡಿದಿದ್ದರು ಬೆಂಗಳೂರಿನ ನೆಲಮಂಗಲದ ಕೃಷಿಕರಾದ ಮಂದಾಕಿನಿ. ತೀರ್ಥಹಳ್ಳಿಯ ಆರಗ ಗ್ರಾಮದ ಶಂಕರನಾರಾಯಣ ಭಟ್ಟರನ್ನು ಅವರಿಗೆ ಪರಿಚಯಿಸಿದೆ. ಇರುವ 20 ಕಪಿಲೆ ಹಸುಗಳಲ್ಲಿ ಒಂದನ್ನು ಭಟ್ಟರು ಮಂದಾಕಿನಿಯವರಿಗೆ ಮಾರಿದರು. ಕಾಡು–ಮೇಡು, ಗದ್ದೆ–ತೋಟ, ರಸ್ತೆಯ ಇಕ್ಕೆಲಗಳಲ್ಲಿ ಮೇವು ಅರಸುತ್ತಾ ಸಂಚರಿಸುತ್ತಿದ್ದ ಈ ದನಗಳನ್ನು ಕೊಳ್ಳಲು ಬಯಲುಸೀಮೆಯಿಂದ ಹಲವಾರು ಜನರು ಮಲೆನಾಡಿಗೆ ಬರುತ್ತಿದ್ದಾರೆ. ಹಾಗಾಗಿ 4–5 ಸಾವಿರಕ್ಕೆ ಸಿಗುತ್ತಿದ್ದ ದನಗಳ ಬೆಲೆ ಈಗ ದ್ವಿಗುಣಗೊಂಡಿದೆ. ಇದೇ ಲೇಖನ ನೋಡಿ ಅಮೇರಿಕದ ಟೆಕ್ಸಾಸ್‌ನಲ್ಲಿರುವ ಕರ್ನಾಟಕ ಮೂಲದ ಡಾ. ಮಧುಸೂದನ ಕರೆ ಮಾಡಿದ್ದರು. ಮಲ್ನಾಡಗಿಡ್ಡ ಸಂರಕ್ಷಣೆಗೆ ಆರ್ಥಿಕ ಸಹಾಯ ನೀಡಲು ಮುಂದಾದ ಇವರನ್ನು ಸಂಪರ್ಕಿಸಲು ಮಲ್ನಾಡಗಿಡ್ಡ ಸಂವರ್ಧನ ಪ್ರತಿಷ್ಠಾನಕ್ಕೆ ಪರಿಚಯಿಸಿದೆ. ಇದು ಸಹ ಅನನ್ಯ ಅನುಭವ. ಇದೇ ರೀತಿ ಲೇಖನ ಓದಿದ ಗುಲ್ಬರ್ಗ ರೇಡಿಯೋ ಕೇಂದ್ರದವರು ಫೋನ್ ಮುಖೇನ ಸಂದರ್ಶನ ಪಡೆದಿದ್ದು ಸಹ ಒಂದು ವಿಶಿಷ್ಟ ಅನುಭವ.

'ಬೇಸಿಗೆಯ ಬೇಗೆ ನೀಗುವುದು ಹೇಗೆ?' ಇದು ನನ್ನ ಇನ್ನೊಂದು ಪ್ರಕಟಿತ ಲೇಖನ. ಬೇಸಿಗೆ (ಮೇ ತಿಂಗಳ) ಕಾಲದಲ್ಲಿಯೇ ಪ್ರಕಟವಾದ ಇದಕ್ಕೆ ನೂರಾರು ಜನರಿಂದ ಮೆಚ್ಚುಗೆ ವ್ಯಕ್ತವಾಯಿತು. ಆ ಪೈಕಿ ಕೊಟ್ಟಿಗೆಯಲ್ಲಿ ಕೂಲಿಂಗ್ ವ್ಯವಸ್ಥೆಯ ಅನುಶೋಧನೆಯಲ್ಲಿದ್ದ ಮೈಸೂರಿನ ಪರಿಸರ ಇಂಜಿನಿಯರ್ ದಿನೇಶಕುಮಾರ ಅವರಿಗೆ ಲೇಖನ ಪ್ರೇರಣೆಯಾಯಿತು. ಒಂದು ತಿಂಗಳ ನಂತರ

ಕರೆಮಾಡಿ 'ಸಿಸ್ಟಮ್ ರೆಡಿಯಾಗಿದೆ, ಮೈಸೂರಿಗೆ ಬಂದರೆ ತೋರಿಸುತ್ತೇನೆ' ಎಂದಾಗ ಲೇಖನದ ಉದ್ದೇಶ ಈಡೇರಿದ ಭಾವ.

'ಹಸುವಿಗೂ ಮೆತ್ತನೆಯ ಸುಪ್ಪತ್ತಿಗೆ' ಇದು ಕೌಮ್ಯಾಟ ಬಗೆಗಿನ ನನ್ನ ಲೇಖನ. ಇದು ಪ್ರಕಟವಾದ ನಂತರದ ಅನುಭವ ಮನರಂಜನೀಯ. ಲೇಖನ ಪ್ರಕಟವಾದ ದಿನವಿಡೀ ದೂರವಾಣಿ ಕರೆಗಳ ಮಹಾಪೂರ. ಮರುದಿನ ಟಿ.ವಿ. ವಾಹಿನಿಯೊಂದರಿಂದ 'ಕೌಮ್ಯಾಟ್ ಬಗ್ಗೆ ಕಾರ್ಯಕ್ರಮ ಶೂಟ್ ಮಾಡ್ತೀವಿ ದಯವಿಟ್ಟು ಸಹಕರಿಸಿ' ಎಂಬ ವಿನಂತಿ. ಸರಿ ಎಂದು ಗೆಳೆಯ ಡಾ. ತಿಮ್ಮಪ್ಪ ಅವರನ್ನೂ ಜೊತೆಗೆ ಕರೆದುಕೊಂಡು ಟಿ.ವಿ.ಯವರೊಂದಿಗೆ ಸುತ್ತಿ ಮನೆ ಸೇರಿದಾಗ ರಾತ್ರಿ ಹನ್ನೊಂದು ಘಂಟೆ. ಮರುದಿನವೇ ಕೌಮ್ಯಾಟ್ ಕುರಿತ ಕಾರ್ಯಕ್ರಮ ಪ್ರಸಾರವಾಗಬೇಕಿತ್ತು. ನನ್ನಾಕೆ ಬಂಧುಗಳಿಗೆಲ್ಲ ನಮ್ಮವರ ಕಾರ್ಯಕ್ರಮ ಬರುತ್ತೆ ನೋಡಿ ಎಂದು ಫೋನ್ ಮಾಡಿದ್ದೇ ಮಾಡಿದ್ದು. ನಾನು ಸ್ನೇಹಿತರಿಗೆಲ್ಲ ಎಸೆಮ್ಮೆಸ್ ಕಳಿಸಿದ್ದೆ. ಆಫೀಸ್‌ಗೆ ರಜೆ ಹಾಕಿ ಇಡೀ ದಿನ ಕಾದೆ. ಆದರೆ ಕೌಮ್ಯಾಟ್ ಕಾರ್ಯಕ್ರಮದ ಬದಲಾಗಿ ಬಿಸಿಬಿಸಿ ಚರ್ಚೆಯೊಂದು ಪ್ರಸಾರವಾಯಿತು.

ಈ ರೀತಿ ಅನುಭವಗಳು ಅನೇಕ. ಆದರೆ ಕಾಮ್ ಜತೆಗಿನ ಪಯಣವೇ ಒಂದು ಅದ್ಭುತ ಅನುಭವ. ಮುಗಿದದ್ದೇ ಗೊತ್ತಾಗಲಿಲ್ಲ. ಪ್ರತಿ ತಿಂಗಳು ಲೇಖನ ಬರೆದು ಕೊರಿಯರ್‌ಗೆ ಹಾಕಿದಾಗ ಆದ ಅನುಭವ ಅಕ್ಷರಗಳಲ್ಲಿ ಹೇಳಲು ಸಾಧ್ಯವಿಲ್ಲ. ನಂತರ ಲೇಖನ ಪರಿಷ್ಕರಣೆಗೊಂಡು ಬರುವುದನ್ನು ಕಾಯುತ್ತ ದಿನ ಕಳೆಯುವುದು, ಪರಿಷ್ಕರಿಸಿದ ಲೇಖನ ಪ್ರಕಟಣೆಗೆ ಕಳಿಸುವುದು... ಹೀಗೆ ತಿಂಗಳುಪೂರ್ತಿ ಬರವಣಿಗೆಯ ಗುಂಗಿನಲ್ಲಿಯೇ ಇರುತ್ತಿದ್ದೆ.

ನನ್ನ ಯೋಚನೆ, ನೋಟ ಹಾಗೂ ಬೋಧನೆಯ ರೀತಿ ಕಾಮ್ ತರಬೇತಿಯಿಂದ ಬದಲಾಗಿದೆ. ಈಗ ಕ್ಯಾಮರಾ ಸದಾ ಬಳಿಯಲ್ಲಿಯೇ ಇರುತ್ತದೆ. ವಿಶೇಷವೆನಿಸಿದ್ದನ್ನೆಲ್ಲ ಕ್ಲಿಕ್ಕಿಸುತ್ತೇನೆ. ಮೊದಲು ಏನು ಬರೆಯುವುದೆಂದು ತಲೆ ಕೆಡಿಸಿಕೊಳ್ಳುತ್ತಿದ್ದೆ. ಈಗ ಬರೆಯುವುದಕ್ಕೆ ಎಷ್ಟೆಲ್ಲ ಇದೆಯಲ್ಲ ಅನಿಸುತ್ತಿದೆ. ಕಾಮ್ ಬಳಗಕ್ಕೆ ಸದಾ ಚಿರಋಣಿ.

#13, ಲಕ್ಷ್ಮಿವೆಂಕಟೇಶ್ವರ ನಿಲಯ, 1ನೇ ಕ್ರಾಸ್
3ನೇ ಹಂತ, ವಿನೋಬನಗರ,ಶಿವಮೊಗ್ಗ – 577204
9060440543 ~ nagarajavet@gmail.com

## ಇದುವರೆಗಿನ ಕಾಮ್ ಫೆಲೋಗಳು

### 2004

**ವಾಣಿ ಶ್ರೀಹರ್ಷ**
ಕೊಪ್ಪ, ಚಿಕ್ಕಮಗಳೂರು

**ಸುಮಾ ಮಂಜುನಾಥ**
ಬೆಂಗಳೂರು

**ಮತ್ತಿಗಾರ ನಾಗರಾಜ**
ಬೆಂಗಳೂರು

**ಪ್ರಶಾಂತ ಶಿವರಾಮ ಗಾಂವ್ಕರ**
ಯಲ್ಲಾಪುರ, ಉತ್ತರ ಕನ್ನಡ

**ಹೆಚ್.ಎನ್. ಸತ್ಯನಾರಾಯಣ**
ಹರಿಹಳ್ಳಿ, ಹಾಸನ

**ಆರ್. ಪ್ರಸನ್ನ ಕುಮಾರ**
ಎಳ್ಳಗದ್ದೆ, ಶಿವಮೊಗ್ಗ

### 2005

**ದಿ. ಹೆಚ್.ಕೆ. ಬಸವರಾಜು**

**ಶೈಲಜಾ ಬೆಳ್ಳಂಕಿಮಠ**
ಗೋಕಾಕ, ಬೆಳಗಾವಿ

**ಪುಷ್ಪಾ ಎಂ. ಕಮ್ಮಾರ್**
ಸೊರಬ, ಶಿವಮೊಗ್ಗ

**ಸಿದ್ದರಾಮೇ ಗೌಡ**
ಬೆಂಗಳೂರು

**ರವಿಶಂಕರ್ ಹೆಚ್.ಜಿ.**
ಬೆಂಗಳೂರು

**ಕೆ. ಕುಮಾರ್**
ಬೆಂಗಳೂರು

### 2006

**ಕೆ. ರೇಖಾ ಸಂಪತ್**
ಬೆಂಗಳೂರು

**ವಂದನಾ ಎ. ಪೂಜಾರಿ**
ಗೋಕಾಕ, ಬೆಳಗಾವಿ

**ಸುಶೀಲಾ ಬಿ. ಪಾಟೀಲ**
ಜಮಖಂಡಿ, ಬಾಗಲಕೋಟೆ

**ಗಿರೀಶ್ ಹೆಚ್.ಸಿ.**
ಮಧುಗಿರಿ, ತುಮಕೂರು

**ದೇವರಾಜ ಕೆ.ಕೆ.**
ಸುಳ್ಯ, ದಕ್ಷಿಣ ಕನ್ನಡ

**ಜೆ. ಭೋಜರಾಜ್**
ಸಂತೇಬೆನ್ನೂರು, ದಾವಣಗೆರೆ

### 2007

**ಅನುಸೂಯ ಎಸ್. ಶರ್ಮ**
ಬೆಂಗಳೂರು

**ರವಿಶಂಕರ ದೊಡ್ಡಮಾಣಿ**
ಎಡನಾಡು, ಕಾಸರಗೋಡು

**ಹರ್ಷವರ್ಧನ ವಿ. ಶೀಲವಂತ**
ಧಾರವಾಡ

**ಜೆ. ಶಿವಣ್ಣ**
ರಾಮನಗರ

**ಬಿ.ಟಿ. ಪೋಷಿಣಿ**
ಹೆಗ್ಗಡದೇವನ ಕೋಟೆ ತಾಲೂಕು

**ಅಕ್ಷಯರಾಮ ಕೆ.**
ಬೆಂಗಳೂರು

**ಲಲಿತಾ ರಾವ್ ಎಂ.ಜಿ.**
ಪಾವಗಢ, ತುಮಕೂರು

**ಆರ್.ಬಿ. ಹಿರೇಮಠ**
ಬೈಲಹೊಂಗಲ, ಬೆಳಗಾವಿ

**ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ್**
ಮಂಗಳೂರು

**ನಿತಿನ್ ಹೆಗ್ಡೆ**
ಬೆಂಗಳೂರು

**ಶ್ರೀಪ್ರಕಾಶ**
ರಾಮದುರ್ಗ, ಬೆಳಗಾವಿ

**ಸುಧಾ ರಾಯನಗೌಡರ್**
ಹುಲಕೋಟಿ, ಗದಗ

**ಜಯಪ್ರಸಾದ್ ಬಳ್ಳೇಕೆರೆ**
ಸಕಲೇಶಪುರ, ಹಾಸನ

**ಹೆಚ್.ವಿ. ದಿವ್ಯಾ**
ಬೆಂಗಳೂರು

**ಬಿ.ಎಂ. ಲವಕುಮಾರ್**
ಮೈಸೂರು

**ಡಾ. ಜಿ.ವಿ. ಮುರಳಿಕೃಷ್ಣ**
ಬೆಂಗಳೂರು

**ಶ್ರೀಕಂಠ**
ಬೆಂಗಳೂರು

**ಹೇಮಾ ಮೊರಬ**
ಗದಗ

**ಚಂದ್ರಶೇಖರ್ ಕಳ್ಳೀಮನಿ**
ಬಳ್ಳಾರಿ

### 2008

**ಡಾ. ರಾಚಪ್ಪ ಎಚ್.**
ಲಿಂಗಸಗೂರು, ರಾಯಚೂರು

**ಸಿ. ಎಸ್. ಸುರೇಶ್**
ನಾಪೋಕ್ಲು, ಕೊಡಗು

**ಪ್ರಕಾಶ ಜಿ. ಭಟ್**
ಪುತ್ತೂರು, ದಕ್ಷಿಣ ಕನ್ನಡ

**ಪರಮೇಶ್ವರಯ್ಯ ಸೊಪ್ಪಿಮಠ**
ಹಗರಿಬೊಮ್ಮನಹಳ್ಳಿ, ಬಳ್ಳಾರಿ

**ಸರ್ವಮಂಗಳಾ ಬಿ. ಪಾಟೀಲ್**
ಧಾರವಾಡ

**ಸೀಮಾ ವಿ. ಶೂರಪಾಲಿ**
ಗುಲ್ಬರ್ಗ

**ಮನೋರಮಾ ಜೋಶಿ**
ಶಿರಸಿ, ಉತ್ತರ ಕನ್ನಡ

**ದೇವೇಂದ್ರ ಆರ್. ಜರ್ಲಿ**
ಹಿರೇವಂಕಲಕುಂಟಾ, ಕೊಪ್ಪಳ

**ಶರಣಬಸವ ಸಂಗಪ್ಪ ಕುಷ್ಟಗಿ**
ಕೊಪ್ಪಳ

**ಶಶಿಧರ್ ಸಕ್ಕರೆಮಕ್ಕಿ**
ಕೊಪ್ಪ, ಚಿಕ್ಕಮಗಳೂರು

**ಸಿ.ಕೆ. ಶ್ರೀಲಕ್ಷ್ಮೀ**
ಚನ್ನಪಟ್ಟಣ, ರಾಮನಗರ

**ಜಯರಾಂ ದೇವವೃಂದ**
ಬೆಂಗಳೂರು

**ಶಾಮರಾವ್ ಕುಲಕರ್ಣಿ**
ಬಿಜಾಪುರ

**ಅಚ್ಚನಹಳ್ಳಿ ಸುಚೇತನ**
ಬೆಂಗಳೂರು

**ಹೆಚ್.ಎನ್. ರಂಗಪ್ಪ**
ಆನವೇರಿ, ಶಿವಮೊಗ್ಗ

**ಸಿ. ಶಿವಾನಂದ**
ಹಗರಿಬೊಮ್ಮನಹಳ್ಳಿ, ಬಳ್ಳಾರಿ

**ಗೀತಾಂಜಲಿ ದತ್ತಾತ್ರೇಯ**
ಚೋರಡಿ, ಶಿವಮೊಗ್ಗ

## 2009

**ಜಿ. ಗಣಪತಿ ಭಟ್**
ಕನಕಪುರ ತಾಲೂಕು, ರಾಮನಗರ

**ಕೆ.ಎಸ್. ಪೂರ್ಣಿಮ**
ಕಾನಹಳ್ಳಿ, ಹಾಸನ

**ಲೀಲಾ ನಾ. ಕೌಜಗೇರಿ**
ಗೋಕಾಕ, ಬೆಳಗಾವಿ

**ಡಾ. ಅಶ್ವಿನಿ ಕೃಷ್ಣಮೂರ್ತಿ**
ಅಡ್ಯನಡ್ಕ, ದಕ್ಷಿಣ ಕನ್ನಡ

**ಸಹನಾ ಕಾಂತಬೈಲು**
ಬಾಲಂಬಿ, ಮಡಿಕೇರಿ

**ಜಯರಾಂ ಅಂಕ್ಸಳ್ಳಿ**
ಮುಂಬೈ

**ಲಿಂಗರಾಜ ವಿ. ರಾಮಾಪುರ,** ಹುಬ್ಬಳ್ಳಿ

**ಎಂ.ಜಿ. ದಿನೇಶ್**
ದೇವವೃಂದ, ಚಿಕ್ಕಮಗಳೂರು

**ರಾಜು ಸ್ಟೀವನ್ ಕ್ರಾಸ್ತಾ**
ಕುಂಬಳೆ, ಕಾಸರಗೋಡು

**ಮಂಜುನಾಥ ಎಚ್.**
ಬೆಂಗಳೂರು

**ರವಿ ಆರ್. ವಿಶ್ವನಾಥಪುರ**
ಬೆಂಗಳೂರು ಗ್ರಾಮಾಂತರ

**ಶ್ರೀಲತ ಕೆ.ಎನ್.**
ತುಮಕೂರು

**ಸರಸ್ವತಿ ಬಿ. ಧರೆಣ್ಣೆ**
ಬೆಳಗಾವಿ

**ಶಾರದಾ ಜಿ. ಪಾಟೀಲ**
ಧಾರವಾಡ

## 2010

**ರಮಾ ಅರಕಲಗೂಡು**
ಬೆಂಗಳೂರು

**ಶಶಿಧರ್ ಹೆಮ್ಮಣ್ಣ**
ಉಡುಪಿ

**ಸುರೇಶ ಧಾರವಾಡಕರ್**
ಶಕ್ತಿ ನಗರ, ರಾಯಚೂರು

**ನಿಂಗದಹಳ್ಳಿ ಮಲ್ಲಿಕಾರ್ಜುನ**
ಗುಲ್ಬರ್ಗ

**ಕೆ.ವಿ. ಸರಸ್ವತಿ**
ಬೆಂಗಳೂರು

**ಪ್ರಮೀಳಾ ಸಿ.ಕೆ.**
ಬೆಂಗಳೂರು

**ಆಶಾಲತಾ ಆರ್. ಕುಲಕರ್ಣಿ**
ಹಿರಿಯೂರು ತಾಲೂಕು, ಚಿತ್ರದುರ್ಗ

**ಗಂಗಾ ಅಂಕದ**
ಧಾರವಾಡ

**ಸರವು ಸದಾನಂದ**
ಅಡ್ಯನಡ್ಕ, ದಕ್ಷಿಣ ಕನ್ನಡ

**ಸುಬ್ರಾಯ ಮ. ಹೆಗಡೆ**
ಹಳವಳ್ಳಿ, ಉತ್ತರ ಕನ್ನಡ

**ಮಧುಮತಿ ದೇ. ಪಾಟೀಲ**
ಧಾರವಾಡ

**ದಿಲೀಪಕುಮಾರ ಮಸೂತಿ**
ಹಾವೇರಿ

## 2011

**ಎನ್.ಎಂ. ನಟರಾಜ್ ನಾಗಸಂದ್ರ**
ದೊಡ್ಡಬಳ್ಳಾಪುರ

**ಡಾ. ಮಂಜುನಾಥ ಎಲ್.**
ಹಾಸನ

**ಬಿ.ಎಂ. ಪ್ರತಿಭಾ**
ಭದ್ರಾವತಿ

**ಪಾಲಚಂದ್ರ**
ಬೆಂಗಳೂರು

**ರಮೇಶ ವಿ. ಬಳ್ಳಾ**
ಬಾಗಲಕೋಟೆ

**ಆಶಾ ಹೆಗಡೆ ಬೊಮ್ಮನಹಳ್ಳಿ**
ಬೆಂಗಳೂರು

**ಕಾವ್ಯಾ ಪಿ.ಕೆ.**
ಹುಬ್ಬಳ್ಳಿ

**ವಿನೋದ ರಾ. ಪಾಟೀಲ**
ಬೆಳಗಾವಿ

**ಸುನೀತಾ ಕುಸುಗಲ್**
ಧಾರವಾಡ

## ಕಾಮ್ ಫೆಲೋಗಳು 2012


**ಡಾ. ಗಣೇಶ ಹೆಗಡೆ**
ಶಿರಸಿ


**ಡಾ. ನಾಗರಾಜ ಕೆ.ಎಮ್.**
ಶಿವಮೊಗ್ಗ


**ಡಾ. ತಿಮ್ಮಪ್ಪ ಜೆ.ಆರ್.**
ಶಿವಮೊಗ್ಗ


**ರವೀಂದ್ರ ಹೊನವಾಡ**
ಗಜೇಂದ್ರಗಢ


**ಎಸ್. ರೋಹಿಣಿ ಶರ್ಮ**
ಸಾಗರ


**ಮಾಲತಿ ಹೆಗಡೆ**
ಧಾರವಾಡ


**ನಯನ ಕೆ.ಬಿ.**
ತುಮಕೂರು


**ರಾಜರಾಜೇಶ್ವರಿ ಜೋಶಿ**
ಧಾರವಾಡ,


**ಸಿದ್ಧಲಿಂಗಪ್ಪ ಬೀಳಗಿ**
ಹುನಗುಂದ


**ಬಿ. ಕೋಮಲ**
ತಿಪಟೂರು


**ನಾಗೇಶ ಹೆಗಡೆ**
ಸಿದ್ದಾಪುರ


**ವಿನೋದ್ ಕುಮಾರ್ ಎ.**
ಪುತ್ತೂರು


**ಜೆ. ಪಂಪನ ಗೌಡ.**
ಕೊಪ್ಪಳ


**ದೇವರಾಜ ಎಮ್. ನಾಯ್ಕ**
ದಾಂಡೇಲಿ


**ಕೆ.ಎ. ಜಮಖಂಡಿ**
ಬಾಗಲಕೋಟೆ


**ವಿ.ಬಿ. ಪಾಟೀಲ**
ಗದಗ

**ಫೆಲೋ ಪ್ರೊಫೈಲ್:**

- ಕೃಷಿಕರು – 23
- ಕೃಷಿ–ತೋಟಗಾರಿಕೆ–ಪಶುಸಂಗೋಪನಾ ಇಲಾಖೆಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳು – 26
- ಪತ್ರಕರ್ತರು – 13
- ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರು – 14
- ಬೋಧಕರು – 10
- ಇತರ ಉದ್ಯೋಗಗಳಲ್ಲಿರುವವರು – 19

**ಅತ್ಯುತ್ತಮ ಅಭ್ಯರ್ಥಿ 2012:**
**ಡಾ. ಗಣೇಶ ಹೆಗಡೆ**

**ಈ ಸಂಚಿಕೆಯ ಪ್ರಾಯೋಜಕರು : ದಿನೇಶ ಹೆಗಡೆ, ಪ್ರಸನ್ನ ಹೆಗಡೆ ಹಾಗೂ ವೆಂಕಟೇಶ ಹೆಗಡೆ, ಬೆಂಗಳ**
ಮುಂದಿನ ಸಂಚಿಕೆಯ ಪ್ರಾಯೋಜಕರು: ನಾಗೇಶ ಹೆಗಡೆ, ಬೆಂಗಳೂರು
ಕಾಮ್ ಹಿತೈಷಿಗಳು ಸಂಚಿಕೆಗಳನ್ನು ಪ್ರಾಯೋಜಿಸುವಂತೆ ವಿನಂತಿ. ಒಂದು ಸಂಚಿಕೆಯ ವೆಚ್ಚ ೩ ಸಾವಿರ ರೂಪಾಯಿ.
**'ಕಾಮ್ ನ್ಯೂಸ್'** ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆ. ಇದು ಖಾಸಗಿ ಪ್ರಸಾರಕ್ಕಾಗಿ ಮಾತ್ರ.
ಸಂಪಾದಕಿ: ಅನಿತಾ ಪೈಲೂರು, ವಿಳಾಸ: ಕೃಷಿ ಮಾಧ್ಯಮ ಕೇಂದ್ರ, ನಂ.327, ಮೊದಲನೇ ಮಹಡಿ, ರಾಯಚೂರು ಫ್ಲಾಟ್ಸ್, ನಾರಾಯಣಪುರ, ಧಾರವಾಡ – ೫೮೦೦೦೮.
Email: agriculturalmedia@gmail.com ◆ Website: www.krushimadhyama.org
ವಿನ್ಯಾಸ: ಆರ್ಟೆಕ್, ಧಾರವಾಡ ◆ ಮುದ್ರಣ: ರೀಗಲ್ ಪ್ರಿಂಟ್ ಸರ್ವಿಸ್, ಬೆಂಗಳೂರು